ಸಾಕ್ಷಿಯನ್ನು ದಿನಾಂಕಃ **12.06.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್. ವಕೀಲರಿಂದಃ**

ನಾನು ಕೆ.ಎಸ್.ಆರ್.ಟಿ.ಸಿ ಇಲಾಖೆಯಲ್ಲಿ ಚಾಲಕ ಹಾಗೂ ನಿರ್ವಾಹಕನಾಗಿ 2013 ರಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಮೂಲ ಮನೆ ಹಳದೀಪುರದ ಹಬ್ಬುಗದ್ದೆಯಲ್ಲಿದೆ. ಸದ್ರಿ ಸ್ಥಳದಲ್ಲಿ ಸಾಮಾಯಿಕವಾಗಿ 5 ಗುಂಟೆ ಸ್ಥಳವಿರುತ್ತದೆ. ನಾನು ಈಗ ನಮ್ಮ ಹಳೆಯ ಮನೆಯ 4 ಫರ್ಲಾಂಗ ದೂರದಲ್ಲಿ ಹೊಸದಾಗಿ ಮನೆಯನ್ನು ಕಟ್ಟಿದ್ದೇನೆ ಹಾಗೂ ಸದ್ರಿ ಮನೆಯನ್ನು ಕಟ್ಟಲು ಸ್ಥಳವನ್ನು 6 ವರ್ಷದ ಹಿಂದೆ ಖರೀದಿ ಮಾಡಿದ್ದೇನೆ.

ನವಿಲಗೋಣ ಗ್ರಾಮದ ಸ.ನಂಃ 399 ಹಿಸ್ಸಾ 4ಬ 3 ಗುಂಟೆ ಸ್ಥಳವನ್ನು ನಾನು 2012 ನೇ ಸಾಲಿನಲ್ಲಿ ವಾದಿಯ ಕಡೆಯಿಂದ ಖರೀದಿ ಮಾಡಿದ್ದೇನೆ. ಸ.ನಂಃ 399 ರಲ್ಲಿ ಎಷ್ಟು ಕ್ಷೇತ್ರ ಇತ್ತು ಎಂಬುದನ್ನು ಸ್ಥಳವನ್ನು ಖರೀದಿ ಮಾಡುವ ಕಾಲಕ್ಕೆ ನಾನು ಪರಿಶೀಲಿಸಿ ನೋಡಿದ್ದೇನೆ. ನಾನು ಖರೀದಿ ಮಾಡುವ ಕಾಲಕ್ಕೆ ಸದ್ರಿ ಸ್ಥಳವು ಅಂದಾಜು 1 ಎಕರೆ 17 ಗುಂಟೆ ಇತ್ತು. ಸದ್ರಿ ಸ್ಥಳದಲ್ಲಿ 3 ಗುಂಟೆ ಸ್ಥಳವು ಬಿನ್ ಶೇತ್ಗಿಯಾಗಿದ್ದು, ಇನ್ನುಳಿದ ಸ್ಥಳವು ಶೇತ್ಗಿ ಜಮೀನಾಗಿರುತ್ತದೆ. ಆ ಸಮಯದಲ್ಲಿ ಸದ್ರಿ ಸ್ಥಳದ ಸಂಪೂರ್ಣ ಕ್ಷೇತ್ರವು ವಾದಿಗೆ ಸಂಬಂಧಿಸಿದ್ದಾಗಿತ್ತು.

ಸದ್ರಿ ನಾನು ಖರೀದಿಸಿದ 3 ಗುಂಟೆ ಸ್ಥಳವು ಸ.ನಂಃ 399 ರ ಪೂರ್ವ ದಿಕ್ಕಿಗೆ ಬರುತ್ತದೆ ಹಾಗೂ ಸದ್ರಿ 3 ಗುಂಟೆ ಕ್ಷೇತ್ರದ ಕುರಿತಾಗಿ ಪ್ರತ್ಯೇಕ ನಕಾಶೆ ಇತ್ತು. ಸದ್ರಿ 3 ಗುಂಟೆ ಕ್ಷೇತ್ರವು ಸ.ನಂಃ 399 ರ ಗಡಿಗೆ ತಾಗಿಕೊಂಡು ಪೂರ್ವ ದಿಕ್ಕಿಗೆ ಇತ್ತು. ಸದ್ರಿ ನಾನು ಖರೀದಿಸಿದ 3 ಗುಂಟೆ ಕ್ಷೇತ್ರದ ಪೂರ್ವ ದಿಕ್ಕಿಗೆ ಪಂಚಾಯತ ರಸ್ತೆ, ದಕ್ಷಿಣ ದಿಕ್ಕಿಗೆ ಸ.ನಂಃ 399 ಹಿಸ್ಸಾ 4ಅ2 ಇದ್ದು, ಉತ್ತರ ದಿಕ್ಕಿಗೆ ಬೇರೆ ಸರ್ವೆ ನಂಬರ ಇದ್ದು ಅದು ಈಗ ನನಗೆ ನೆನಪಿಗೆ ಬರುತ್ತಿಲ್ಲ. ನಾನು 3 ಗುಂಟೆ ಸ್ಥಳವನ್ನು ಖರೀದಿ ಮಾಡುವ ಕಾಲಕ್ಕೆ ವಾದಿಯ ಜಮೀನು ಸದ್ರಿ ಜಾಗಕ್ಕೆ ಹೊಂದಿಕೊಂಡು ಇತ್ತು. ನಾನು 3 ಗುಂಟೆ ಸ್ಥಳವನ್ನು ಖರೀದಿ ಮಾಡುವಾಗ ಕ್ರಯಪತ್ರದಲ್ಲಿ ಅದರ ಬೌಂಡರಿಗಳನ್ನು ನಮೂದಿಸಲಾಗಿದೆ. ನಾನು ಸದ್ರಿ 3 ಗುಂಟೆ ಸ್ಥಳದ ಕ್ರಯಪತ್ರದಲ್ಲಿ ಗಡಿ ಗುರುತುಗಳನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ನಾನು ಖರೀದಿಸಿದ 3 ಗುಂಟೆ ಸ್ಥಳದ ಪೂರ್ವ ದಿಕ್ಕಿಗೆ ಇರುವ ರಸ್ತೆಯನ್ನು ಉಪಯೋಗಿಸುವುದಾಗಿ ಕ್ರಯ ಪತ್ರದಲ್ಲಿ ಬರೆದಿದ್ದು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ